ಲೇಖನ 02

# ಅಮ್ಮಾ ನನಗೂ ಹಾಲುಣಿಸಮ್ಮಾ...!

ನಾಗರಹೊಳೆ ಹುಲಿ ಯೋಜನೆಯ ರಾಷ್ಟ್ರೀಯ ಉದ್ಯಾನವನದ ಕಬಿನಿ ದಮ್ಮನಕಟ್ಟೆ ವಲಯದ ಕಾಡಿನಲ್ಲಿ ವನ್ಯಜೀವಿ ಛಾಯಾಗ್ರಹಣಕ್ಕಾಗಿ ಅರಣ್ಯ ಇಲಾಖೆಯ ಜೀಪಿನಲ್ಲಿ ನಾನು ಹೇಮಚಂದ್ರ ಜೈನ್, ಪಾಲಹಳ್ಳಿ ಸುನೀಲ ಇಂಗ್ಲೋಸಿಸ್ ಸಾಗುತ್ತಿದ್ದೇವು. ಅರಣ್ಯವು ಹಚ್ಚಹಸಿರಿನ ಗಿಡ-ಮರಗಳಿಂದ ಕಂಗೊಳಿಸುತ್ತಿತ್ತು. ಆಗ ತಾನೇ ಉದಯಿಸಿದ ಭಾಸ್ಕರನಿಂದ ಖಗ-ಮೃಗಗಳು ಚಟುವಟಿಕೆ ಪ್ರಾರಂಭಿಸಿದ್ದವು. ನವಿಲುಗಳು ಮೇ-ಆವ್... ಮೇ-ಆವ್... ಮೇ-ಆವ್... ಎಂದು ಕಾಡಿಗೆಲ್ಲ ಮಾರ್ಧನಿಸುವಂತೆ ಕೂಗುತ್ತಿದ್ದವು. ತೆರದ ಜೀಪು ನಿಧಾನವಾಗಿ ಚಲಿಸುತ್ತಿತ್ತು. ಸ್ವಲ್ಪ ದೂರದ ಪೊದೆಯ ಮುಂದೆ ಹುಲ್ಲಿನಿಂದ ಕೂಡಿದ ಅಲ್ಲೊಂದು ಇಲ್ಲೊಂದು ಎತ್ತರದ ಮರಗಳಿರುವ ಬಯಲು ಜಾಗೆಯಲ್ಲಿ ಜಿಂಕೆಗಳ ಹಿಂಡು ಸ್ವಚಂದವಾಗಿ ಹುಲ್ಲನ್ನು ಮೇಯುತ್ತಿದ್ದವು. ತಕ್ಷಣ ಚಾಲಕನಿಗೆ ವಾಹನ ನಿಲ್ಲಿಸುವಂತೆ ಸೂಚನೆಯಿತ್ತು, ಅವುಗಳ ನಾಲ್ಕಾರು ಪೋಟೋ ಕ್ಲಿಕ್ಕಿಸುತ್ತಿದ್ದ ಹಾಗೇ ಜಿಂಕೆಯ ಮರಿಯೊಂದು ಪುಟ್ಟ ನೆಗೆತದೊಂದಿಗೆ ಓಡೋಡಿ ಬಂದು ತಾಯಿಯನ್ನು ಸೇರಿ ಹಾಲು ಕುಡಿಯಲು ಪ್ರಾರಂಭಿಸಿತು.

ಎತ್ತರದ ಮರಗಳ ನೆರಳು ಜಿಂಕೆಯ ಮೇಲೆ ಬಿದ್ದಿದ್ದರೇ, ಸೂರ್ಯನ ಕಿರಣವು ಪೊದೆಯ ಮೇಲೆ ಬಿದ್ದು ಪೊದೆಯೇ ಹೈಲೆಟ್ಟಿದ್ದು ಅದನ್ನು ಹೊಗಲಾಡಿಸಲು ಕ್ಯಾಮರಾದಲ್ಲಿ ರಿಡಿಂಗ್ ಸೆಟ್ ಮಾಡಿಕೊಂಡು ಪೊಟೋಗ್ರಫಿಗೆ ಅಣಿಯಾದೆ. ನಿಂತ ಜಾಗದಲ್ಲಿ ನಿಲ್ಲದೇ ಮುಂದೆ ಸಾಗುತ್ತಿದ್ದವು. ನಮ್ಮ ಜೀಪು ಅವನ್ನೇ ಫಾಲೋ ಮಾಡುತ್ತಾ ಸಾಗುತ್ತಿತ್ತು.


ಚಿತ್ರ ಕೃಪೆ: ಶಶಿಧರಸ್ವಾಮಿ ಆರ್. ಹಿರೇಮಠ

ಜಿಂಕೆಗಳಿಗೆ ಒಂದೇ ಮರಿಯಲ್ಲವೇ ಇದರಲ್ಲಿ ಏನೂ ವಿಶೇಷ ಅಂತಿರಾ?
ಒಂದೆರಡು ನಿಮಿಷ ಕಳೆದಿರಬೇಕು ಚಂಗನೆ ಜಿಗಿಯುತ ಇನ್ನೊಂದು ಮರಿಯು ತಾಯಿಯನ್ನು ಸಮೀಪಿಸಿ ಅಮ್ಮಾ ನನಗೂ ಹಾಲುಣಿಸಮ್ಮಾ...! ಎಂಬಂತೆ ಗೋಚರಿಸಿತು. ಈ ತಾಯಿ ಜಿಂಕೆಗೆ ಎರಡು ಮರಿಗಳಿರುವುದೇ ವಿಶೇಷ ಮತ್ತು ಅಚ್ಚರಿ. ಜಿಂಕೆಗಳು ಒಂದು ಸೂಲಿಗೆ ಒಂದೇ ಮರಿಯನ್ನು ಹೆರುತ್ತವೆ. ಅಪರೂಪವಾಗಿ ಎರಡು ಮರಿಗಳಿಗೆ ಜನ್ಮ ನೀಡುತ್ತವೆ. ಹಾಗೆ ಈ ಜಿಂಕೆಗೆ ಎರಡು ಮರಿಗಳು, ಅವಳಿ-ಜವಳಿ ಇದ್ದಂತೆ. ತಾಯಿಯು ಇನ್ನೊಂದು ಮರಿಯನ್ನು ಸಂಭಳಿಸಲು ಪ್ರೀತಿಯಿಂದ ಮುಖ, ಕುತ್ತಿಗೆಯನ್ನು ತನ್ನ ನಾಲಿಗೆಯಿಂದ ನೆಕ್ಕುತ್ತಾ ಮೈದಡವಿ ಪ್ರೀತಿಯಿಂದ ಆಲೈಸಿತು. ಹೋಗು ಕಂದಾ ಹುಲ್ಲನ್ನು ತಿನ್ನು ಆ ಮೇಲೆ ಹಾಲುಣಿಸುವೆ ಎಂದು ಸಂವೇದಿಸಿದಾಗ ಮರಿಯು ಆಯ್ತು ಎಂಬಂತೆ ಹಿಂಡಿನಲ್ಲಿ ಸೇರಿ ಗೆಳೆಯರೊಂದಿಗೆ ಸೇರಿ ಹುಲ್ಲನ್ನು ಮೇಯತೊಡಗಿತು.

ನಾವು ನಿಂತು ಫೋಟೋ ಕ್ಲಿಕ್ಕಿಸಿದಕ್ಕೆ ತಾಯಿಗೆ ನಾಚಿಕೆಯಾಗಿರಬೇಕು, ಮರಿಯನ್ನು ಕಾಲಿನಿಂದ ತಳ್ಳಿದಾಗ ಮರಿಯು ಹಾಲು ಕುಡಿಯುವುದನ್ನು ಬಿಟ್ಟಿತು. ಆಗ ತಾಯಿ-ಮರಿಗಳು ಹಿಂಡಿನಲ್ಲಿ ಹುಲ್ಲನ್ನು ಮೇಯತೊಡಗಿದವು. ಎಲ್ಲ ದೃಶ್ಯಗಳು ನನ್ನ ಕ್ಯಾಮರಾದಲ್ಲಿ ಸೆರೆಯಾದವು. ನಮ್ಮ ಜೀಪು ಮತ್ತೊಂದು ವನ್ಯಜೀವಿಯನ್ನು ಹುಡುಕಿಕೊಂಡು ನಿಧಾನವಾಗಿ ಪಯಣಿಸಿತು.


ಚಿತ್ರ ಕೃಪೆ: ಶಶಿಧರಸ್ವಾಮಿ ಆರ್. ಹಿರೇಮಠ

**ಜಿಂಕೆಗಳ ವಿವರಣೆ:**

ಜಿಂಕೆಗಳನ್ನು ಹರಣಿ, ಹರಿಣ, ಚುಕ್ಕೆ ಜಿಂಕೆ, ಹುಲ್ಲೆ, ಕುರಂಗ, ಸಾರಗ, ಏಣ ಎಂತೆಲ್ಲಾ ಕರೆದು, ಆಂಗ್ಲ ಭಾಷೆಯಲ್ಲಿ ಸ್ಪಾಟೆಡ್ ಡೀರ್ (Spotted Deer) ಚಿತಾಲ್ (Chital) ಅಥವಾ ಚಿತಾಲ್ ಡೀರ್ (Chital Deer) ಎಂದು ಕರೆದು, ಪ್ರಾಣಿ ಶಾಸ್ತ್ರೀಯವಾಗಿ ಆಕ್ಸಿಸ್ ಆಕ್ಸಿಸ್ (Axis axis) ಎಂದು ಹೆಸರಿಸಿ, ಕಾರ್ಡೇಟಾ (Chordata) ವಂಶದ, ಸಸ್ತನಿ (Mammalia) ವರ್ಗದ, ಗೊರಸುಗಳ ಆರ್ಟಿಯೊಡಾಕ್ಟೈಲಾ (Artiodactyla) ಗಣದ, ಚರ್ವಿಡೇ (Cervidae) ಕುಟುಂಬಕ್ಕೆ ಸೇರಿಸಲಾಗಿದೆ.

ಜಿಂಕೆಗಳು ಭಾರತದ ಹಿಮಾಲಯ ತಪ್ಪಲಿನಿಂದ ಕನ್ಯಾಕುಮಾರಿಯವರೆಗೂ ಕಂಡು ಬರುತ್ತವೆಯಾದರೂ ಮರಭೂಮಿ ಪ್ರದೇಶವಾದ ಪಂಜಾಬ ಹಾಗೂ ರಾಜಸ್ಥಾನದ ಕೆಲ ಭಾಗಗಳಲ್ಲಿ ವಾಸಿಸುವುದಿಲ್ಲ. ಕರ್ನಾಟಕದ ಕಾಡುಗಳಲ್ಲಿ ಹೇರಳವಾಗಿ ಕಾಣಸಿಗುತ್ತವೆ. ಇವುಗಳು ಸುಂದರ ಕಂದು ಮೈಮಾಟದ ಮಧ್ಯಮಗಾತ್ರದ ಪುಕ್ಕಲು ಜೀವಿಗಳು. ಗಂಡು ಜಿಂಕೆಗಳನ್ನು ಸಾರಂಗಗಳೆನ್ನುವರು. ಸಾರಂಗವು ಭುಜ ಸುಮಾರು 90 ಸೆಂ.ಮೀ ಮತ್ತು ಹೆಣ್ಣು 70 ಸೆಂ.ಮೀ ತಲುಪುತ್ತದೆ. ಸಾರಂಗದ ತೂಕ 30-75 ಕೆ.ಜಿ. ಹೆಣ್ಣುಗಳ ತೂಕ 25-45 ಕೆ.ಜಿಗಳಷ್ಟಿವೆ. ಹೊನ್ನಿನ ಮೈ ಬಣ್ಣದ ಮೇಲೆ ಆಕರ್ಷಕವಾದ ಬಿಳಿ ಚುಕ್ಕೆಗಳಿವೆ. ಕಪ್ಪು ಪಟ್ಟಿಯೂ ನಡು ಬೆನ್ನಿನ ಮೇಲೆ ಹುರಿಯಂತೆ ಕುತ್ತಿಗೆಯಿಂದ ಬಾಲದವರೆಗೆ ಹರಡಿದೆ. ಹೊಟ್ಟೆಯ ತಳ ಭಾಗವು ಮಾಸಲು ಬಿಳುಪಾಗಿದೆ. ಕಾತುರ ಮತ್ತು ಚಂಚಲತೆಯ ನೋಟದ ವಿಶಾಲವಾದ ಕಣ್ಣುಗಳು, ಶಬ್ದ ಬಂದ ದಿಕ್ಕಿನತ್ತ ತಿರುಗಿ ನಿಮಿರಿ ನಿಲ್ಲುವ ಕಿವಿಗಳು. ಬಾಲದ ತಳಭಾಗವು ಬಿಳಿ. ಸಾರಂಗಗಳು ಹೆಣ್ಣುಗಳಿಗಿಂತ ಗಾತ್ರದಲ್ಲಿ ದೊಡ್ಡವು ಮತ್ತು ಸುಮಾರು ಒಂದು ಮೀಟರ ಉದ್ದವಿರುವ ಮೂರು ಮುಖದ ಕೊಂಬುಗಳನ್ನು ಹೊಂದಿವೆ.


ಚಿತ್ರ ಕೃಪೆ: ಶಶಿಧರಸ್ವಾಮಿ ಆರ್. ಹಿರೇಮಠ

ವಯಸ್ಸಾದ ಸಾರಂಗವು ಕಡು ಕಂದು ಬಣ್ಣದ್ದಾಗಿದೆ. ಪಕ್ಕೆಯ ಕೆಳಗಿನ ಸಾಲಿನ ಬಿಳಿ ಚುಕ್ಕೆಗಳು ಉದ್ದ ಸಾಲಿನಲ್ಲಿ ಒಂದೇ ರೇಖೆಯಲ್ಲಿ ಕಾಣಿಸುತ್ತವೆ. ಸಾರಂಗಗಳು ಪ್ರತಿ ವರ್ಷವೂ ತನ್ನ ಕೋಡುಗಳನ್ನು ಬಿಳಿಸಿ ಅದೇ ಜಾಗದಲ್ಲಿ ಹೊಸ ಕೋಡು ಒಡಮೂಡಲು ಅನುವು ಮಾಡಿಕೊಡುತ್ತದೆ.

ಇವುಗಳು ಹಿಂಡುಗಳಲ್ಲಿ ವಾಸಿಸುತ್ತವೆ. ಒಂದು ಹಿಂಡಿನಲ್ಲಿ 10 ರಿಂದ 30 ಜಿಂಕೆಗಳಿರುತ್ತವೆ. ಎರಡು ಅಥವಾ ಮೂರು ಸಾರಂಗಗಳಿದ್ದು ಉಳಿದವು ಹೆಣ್ಣು ಹಾಗೂ ಮರಿಗಳು. ಸಾಮಾನ್ಯವಾಗಿ ಪ್ರಾಯದ ಹೆಣ್ಣು ಜಿಂಕೆಯು ಹಿಂಡಿನ ಮುಂದಾಳತ್ವವನ್ನು ವಹಿಸಿದರೂ ಬಲಿಷ್ಟವಾದ ಸಾರಂಗವು ಹಿಂಡಿನ ನಾಯಕ. ಅಪಾಯ ಕಂಡು ಬಂದಾಗ ಇದು ತನ್ನ ಬಾಲವನ್ನು ಎತ್ತಿ ಬೆಳ್ಳಗಿನ ಭಾಗವನ್ನು ತೋರ್ಪಡಿಸಿ ಹಿಂಡಿನ ಇತರ ಜಿಂಕೆಗಳಿಗೆ ಎಚ್ಚರಿಕೆ ನೀಡುತ್ತವೆ. ಹುಲ್ಲು, ಎಳೆ ಚಿಗುರು ಮುಖ್ಯಾಹಾರವಾಗಿದೆ. ಜೊತೆಗೆ ಅತ್ತಿ, ಆಲ, ಕರಂಬಳದಂತಹ ಅರಣ್ಯ ಮರುಗಳು ಹಣ್ಣು ಬಿಟ್ಟು ಅವು ಉದರಿ ನೆಲಕ್ಕೆ ಬಿದ್ದಾಗ ಅವನ್ನು ತಿನ್ನಲು ಮುಗಿಬೀಳುತ್ತವೆ. ವಾನರಗಳ ಹಿಂಡುಗಳು ಹೂ ಮತ್ತು ಹಣ್ಣುಗಳನ್ನು ಬಿಳಿಸುವುದರಿಂದ ಅವುಗಳನ್ನು ಬೆಂಬತ್ತುತ್ತವೆ. ಮೇಲ್ದವಡೆಯ ಕೋರೆ ಹಲ್ಲುಗಳು ಇರುವುದಿಲ್ಲ ಆದರೆ ಹಲ್ಲುಗಳು ಸಸ್ಯಾಹಾರಕ್ಕೆ ಮಾರ್ಪಟ್ಟಿವೆ. ಮುಂಜಾವಿನಲ್ಲಿ ಮೇಯಲು ಪ್ರಾರಂಭಿಸುವ ಇವು ನಡುನಡುವೆ ನೆರಳಿನಲ್ಲಿ ಮಲಗಿ ವಿರಮಿಸಿ ಮತ್ತೆ ಪುನಃ ಮಧ್ಯಾಹ್ನದ ಸಮಯದಲ್ಲಿಯೂ ಹಾಗೂ ಸಂಜೆ ಹೊತ್ತಲೂ ಮೇಯಿತ್ತಿರುತ್ತವೆ. ಇವುಗಳ ಕೂಗು ಸಿಳ್ಳೆಯಂತಿದೆ.



ಚಿತ್ರ ಕೃಪೆ: ಶಶಿಧರಸ್ವಾಮಿ ಆರ್. ಹಿರೇಮಠ

ಸಂತಾನಾಭಿವೃದ್ಧಿ ಋತುವಿನಲ್ಲಿ ಸಾರಂಗಗಳು ಮದವೇರಿ ಸಂಭೋಗಕ್ಕೆ ತಯಾರಾಗುತ್ತವೆ. ಹೆಣ್ಣುಗಳನ್ನು ಒಲಿಸಿಕೊಳ್ಳಲು ಎರಡು ಸಾರಂಗಗಳ ನಡುವೆ ಗುದ್ದಾಟ ನಡೆಯುತ್ತವೆ ಇದಕ್ಕೆ ಇಂಗ್ಲೀಷಿನಲ್ಲಿ Stag Sparring ಎನ್ನುತ್ತಾರೆ. ಎರಡು ಸಾರಂಗಗಳು ತಮ್ಮ ಕೊಂಬೆಗಳನ್ನು ಒಂದಕ್ಕೊಂದು ಗುದ್ದಿ ಸೆಣೆಸಾಡುತ್ತವೆ ಹಾಗೇ ಮತ್ತೆ ಹಿಂದೆ ಸರಿದು ಮತ್ತೇ ಜೊರಾಗಿ ಓಡಿ ಬಂದು ಗುದ್ದುತ್ತವೆ. ಈ ಗುದ್ದಾಟವಾಗುತ್ತಿರುವ ಕೊಂಬುಗಳಿಂದ ಕಟ್ ಕಟ್ ಎಂಬ ಸದ್ದು ಕಾಡಿನಲ್ಲಿ ಮಾರ್ದನಿಸುತ್ತಿರುತ್ತದೆ. ಗೆದ್ದ ಸಾರಂಗವು ಹೆಣ್ಣಿನ ಜೊತೆ ಮಿಲನಗೊಳ್ಳುತ್ತದೆ. ಬೆದೆಗೆ ಬಂದ ಗಂಡು ಗಡುಸಾಗಿ ಕೂಗುತ್ತದೆ. ಮತ್ತು ಕಣ್ಣಿನ ಕೆಳಗಿರುವ ವಾಸನಾ ಗ್ರಂಥಿಗಳ ಸ್ರವಿಸುವಿಕೆಯಿಂದಲೂ ಗಂಡು-ಹೆಣ್ಣುಗಳು ಒಂದಕ್ಕೊಂದು ಸಂಪರ್ಕಕ್ಕೆ ಒಳಪಟ್ಟು ಕೂಟಗೊಳ್ಳುತ್ತವೆ. ಗರ್ಭಾವಧಿಯು 7 ರಿಂದ 8 ತಿಂಗಳ ಕಾಲವಾಗಿದ್ದು ಒಂದು ಸೂಲಿಗೆ ಒಂದೇ ಮರಿಯನ್ನು ಹೆರುತ್ತವೆ ಅಪರೂಪವಾಗಿ ಎರಡು ಮರಿಗಳಿಗೆ ಜನ್ಮ ನೀಡುತ್ತವೆ. ಇವುಗಳ ಜೀವಿತಾವಧಿಯು 10 ರಿಂದ 15 ವರ್ಷಗಳು.

ಆಗಾಗ ನೀರಿಗಳಿದು ಈಜಬಲ್ಲವು. ಜಿಂಕೆಗಳನ್ನು ಕಾಡುನಾಯಿ, ಹುಲಿ, ಚಿರತೆ, ಹೆಬ್ಬಾವುಗಳು ಬೇಟೆಯಾಡಿ ಭಕ್ಷಿಸುತ್ತವೆ. ಹಾಗೂ ಮಾನವರು ಮಾಂಸ ಹಾಗೂ ಚರ್ಮಕ್ಕಾಗಿ ಕಳ್ಳ ಬೇಟೆಯಾಡುತ್ತಾರೆ. ಸಾಧು-ಸಂತರು ಕುಳಿತುಕೊಳ್ಳಲು ಇದರ ಚರ್ಮವನ್ನು ಹಾಸಿ ಬಳಸುತ್ತಾರೆ. ಕೊಂಬನ್ನು ನಾಟೀ ಔಷಧಿಯಲ್ಲಿ ಬಳಸಲಾಗುತ್ತಿದೆ.

::::::::::::::::::::::::::::::::::::::::::::::::

**ಶಶಿಧರಸ್ವಾಮಿ ಆರ್. ಹಿರೇಮಠ**
ಕದರಮಂಡಲಗಿ, ಹಾವೇರಿ ಜಿಲ್ಲೆ
ಇಮೇಲ್:shashidhharswamyhiremath@gmail.com